# ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ
## ದಾಂಡೇಲಿ

**ಸಿ.ಸಿಃ 453/2025**

**ಫಿರ್ಯಾದುದಾರರು** : ವ್ಯಂಕಪ್ಪ ವಿಠೋಬ ಗವಾಡ
ವಯಸ್ಸುಃ 46 ವರ್ಷ,
ಉದ್ಯೋಗಃ ಖಾಸಗೀ ಕೆಲಸ,
ವಾಸಃ ಜಗಲಪೇಟೆ, ಜೋಯಿಡಾ.

---ವಿರುದ್ಧ---

**ಆರೋಪಿ** : ದೇಮಣ್ಣ ಈಶ್ವರ್ ಪಾಟೀಲ್
ವಯಸ್ಸುಃ ವಯಸ್ಕ, ಉದ್ಯೋಗಃ ಖಾಸಗೀ
ಕೆಲಸ, ವಾಸಃ ತಾವರಗಟ್ಟಿ, ಖಾನಾಪುರ.

ಆರೋಪಿಯಾದ ನಿಮ್ಮ ವಿರುದ್ದ ಈ ಕೆಳಗಿನಂತೆ ನಾನು ಹೊರಿಸಿರುವಃ.

**ಆ ಪಾ ದ ನೆ**

ಏನೆಂದರೆ ಆರೋಪಿಯಾದ ನೀವು ಫಿರ್ಯಾದಿಗೆ ಒಳ್ಳೆಯ ಸ್ನೇಹಿತರಾಗಿದ್ದು, ಆರೋಪಿಯಾದ ನೀವು ನಿಮ್ಮ ಕೌಟುಂಬಿಕ ಅಡಚಣೆ ಸಲುವಾಗಿ ಫಿರ್ಯಾದಿಯಿಂದ ರೂ.6,00,000/- ರೂಪಾಯಿಗಳನ್ನು ಕೈಗಡ ಅಂತ ಸಾಲ ಪಡೆದುಕೊಂಡಿದ್ದು, ನಂತರ ಫಿರ್ಯಾದಿಯು ಒಂದು ಆರು ತಿಂಗಳು ಬಿಟ್ಟು ನಿಮಗೆ ಸದರಿ ಹಣವನ್ನು ಮರಳಿ ಕೊಡಲು ಕೇಳಿದಾಗ, ನೀವು ದಿನಾಂಕ 28.09.2024 ರಂದು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ, ಲಿಂಗನಮಠ ಶಾಖೆಯ ನಿಮ್ಮ ಖಾತೆ ನಂ. 17032559398 ನೇದ್ದಕ್ಕೆ ಸಂಬಂಧಿಸಿದ ಚೆಕ್ ನಂ. 037198 ಚೆಕ್ಕನ್ನು ರೂ.6,00,000/- ಹಣದ

ಪಾವತಿಗಾಗಿ ಫಿರ್ಯಾದಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾಂಡೇಲಿ ಶಾಖೆಯಲ್ಲಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕನ್ನು ಪರಿಶೀಲಿಸಿ ದಿನಾಂಕ 18.12.2024 ರಂದು "Insufficient Fund" ಎಂಬ ಹಿಂಬರಹದೊಂದಿಗೆ ಉತ್ತರಿಸಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕಃ 10-01-2025 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸನ್ನು ಜಾರಿ ಮಾಡಿದ್ದರೂ ಸಹ ನೀವು ಚೆಕ್ಕಿನ ಹಣ ಪಾವತಿ ಮಾಡದೇ ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂಬ ವಿಚಾರವನ್ನು ತಿಳಿದಿದ್ದು ಚೆಕ್ಕನ್ನು ನೀಡಿ ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆಃ ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

ಉತ್ತರಃ

2 .ಪ್ರಶ್ನೆಃ ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿ ಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಈ ಆರೋಪಣೆಯನ್ನು ದಿನಾಂಕಃ 17.10.2025 ರಂದು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ.)

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದಾಂಡೇಲಿ**